ಸಂಗತಿಯೇ? ಮಗು ಸಂಭ್ರಮವನ್ನು ಹೊತ್ತು ತರಬೇಕು. ಬದಲಿಗೆ ಅದು ದ್ವೇಷವನ್ನೂ, ಕರಾಳ ನೆನಪುಗಳನ್ನೂ ಹೊತ್ತು ತಂದರೆ ಆ ತಾಯಿ–ಮಗುವಿನ ಸಂಬಂಧ ಹೇಗಿರಲು ಸಾಧ್ಯ? ಆರೋಗ್ಯವಂತ ವಾತಾವರಣದಲ್ಲಿ ಬೆಳೆಯಲು ಆ ಮಗುವಿನ ಸುತ್ತ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭಾವನಾತ್ಮಕ ಸಮಸ್ಥಿತಿ ಇರಬೇಕಾಗುತ್ತದೆ. ಆ ಸಮತೋಲನ ಇದೆ ಎಂದೆನಿಸಿದಾಗ ಹೆಣ್ಣು ಆಕೆಗೆ ಬೇಕಿದ್ದರೆ ಮಾತ್ರ ತಾಯ್ತನವನ್ನು ಆರಿಸಿಕೊಳ್ಳುವ ಅವಕಾಶ ನಾಗರಿಕ ಸಮಾಜದಲ್ಲಿ ಇರಬೇಕು. ಪ್ರಭುತ್ವ ತಾಯ್ತನವನ್ನು ಆಕೆಯ ಮೇಲೆ ಹೇರಬಾರದು. ಎಲ್ಲ ಗಂಡಸರಿಗೂ ತಂದೆಯಾಗುವ ಆಸೆ ಹೇಗೆ ಇರುವುದಿಲ್ಲವೋ, ಎಲ್ಲ ಹೆಂಗಸರಿಗೂ ತಾಯಿಯಾಗಲೇ ಬೇಕೆಂಬ ಇಚ್ಛೆ ಇರುವುದಿಲ್ಲ ಎಂಬ ಸರಳ ಸತ್ಯ ನಮಗೆ ಯಾವಾಗ ಅರ್ಥವಾಗುವುದು?

‘ನೀವು ಒಂಬತ್ತು ತಿಂಗಳು ಹೊತ್ತು, ಹೆತ್ತು ನಂತರ ದತ್ತಕಕ್ಕೆ ಕೊಟ್ಟುಬಿಡಿ, ಬಸಿರನ್ನು ಕೊನೆಯಾಗಿಸಬೇಡಿ’ ಎಂದು ಘೋಷಣೆ ಕೂಗುತ್ತವೆ ಗರ್ಭಪಾತವನ್ನು ವಿರೋಧಿಸುವ ಸಂಘಟನೆಗಳು. ಆದರೆ ಎಷ್ಟು ಮಕ್ಕಳನ್ನು ದತ್ತು ಸ್ವೀಕರಿಸಲು ಕುಟುಂಬಗಳು ತಯಾರಿವೆ? ಹಾಗಿದ್ದರೆ ಇಷ್ಟೆಲ್ಲ ಅನಾಥ ಮಕ್ಕಳು ಜಗತ್ತಿನಲ್ಲಿ ಉಳಿದಿರುತ್ತಿದ್ದವೇ?

## ಮಗು ಬೆಳೆಸುವುದೆಂದರೆ...

ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನೇ ತನ್ನ ಜೀವನಾಡಿಯಾಗಿಸಿಕೊಂಡಿರುವ ಅಮೆರಿಕದಂಥ ದೇಶದಲ್ಲಿ ಮಗುವನ್ನು ಬೆಳೆಸುವುದು ಸುಲಭವಲ್ಲ. ಆಸ್ಪತ್ರೆಯಿಂದ ಒಂದು ದಿನದ ಸಾಮಾನ್ಯ ಹೆರಿಗೆಯ ನಂತರ ಮನೆಗೆ ಬಂದಾಗ ಸುಮಾರು ಹದಿಮೂರು ಸಾವಿರ ಡಾಲರುಗಳ, ಅಂದರೆ ಸುಮಾರು ಹತ್ತು ಲಕ್ಷ ರೂಪಾಯಿಗಳ ಬಿಲ್ ಬರುತ್ತದೆ ಅಂದರೆ ನಂಬಲು ಸಾಧ್ಯವೇ? ಆದರಿದು ಅಕ್ಷರಶಃ ಸತ್ಯ. ಸಿಜೇರಿಯನ್ ಹೆರಿಗೆಯಾದರೆ ಈ ಮೊತ್ತ ಇನ್ನೂ ಅಧಿಕ. ಈ ಬಿಲ್ಲಿನ ಬಹುಪಾಲು ಮೊತ್ತವನ್ನು ತಾಯಿಯ ಅಥವಾ ಆಕೆಯ ಸಂಗಾತಿಯ ಆರೋಗ್ಯ ವಿಮೆ ಭರಿಸುತ್ತದೆ.

ಆದರೆ ಗಿಗ್ ಆರ್ಥಿಕತೆಯ ಈ ಕಾಲದಲ್ಲಿ ಎಷ್ಟೋ ಉದ್ಯೋಗದಾತರು ತಮ್ಮ ನೌಕರರಿಗೆ ಆರೋಗ್ಯ ವಿಮೆಯನ್ನು ಒದಗಿಸುವುದಿಲ್ಲ. ಹೀಗಾದಾಗ ಇಷ್ಟೆಲ್ಲ ಹಣವನ್ನು ಆಕೆ ಅಥವಾ ಆಕೆಯ ಸಂಗಾತಿಯೇ ಭರಿಸಬೇಕು. ಇದೊಂಥರಾ ವಿಷ ವರ್ತುಲವಿದ್ದ ಹಾಗೆ. ಒಳ್ಳೆಯ ಜಾಗಗಳಲ್ಲಿ ವಿದ್ಯೆ ಪಡೆದು, ದೊಡ್ಡ ಕಂಪನಿಗಳಲ್ಲಿ ಕೆಲಸ ಪಡೆದವರ ಆಸ್ಪತ್ರೆ ವೆಚ್ಚಗಳನ್ನು ವಿಮೆ ನೋಡಿಕೊಳ್ಳುತ್ತದೆ. ಆದರೆ ಪ್ರತಿಕೂಲ ಪರಿಸ್ಥಿತಿಯಲ್ಲಿ ಬೆಳೆದು ಹಾಗೋ ಹೀಗೋ ಜೀವನ ನಿರ್ವಹಿಸುತ್ತಿರುವವರನ್ನು ಈ ವ್ಯವಸ್ಥೆ ಇನ್ನಷ್ಟು ಮೂಲೆಗೆ ನೂಕುತ್ತದೆ. ಜಗತ್ತಿನ ಮುಂದುವರೆದ ದೇಶಗಳಲ್ಲಿ ಸಾರ್ವತ್ರಿಕ ಆರೋಗ್ಯ ಸೇವೆ ನೀಡದ ಏಕೈಕ ದೇಶವೆಂದರೆ ಅಮೆರಿಕ ಒಂದೇ.

ಹೀಗಾಗಿ ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿರುವ ಈ ತೀರ್ಪು ಆರ್ಥಿಕವಾಗಿ ತಕ್ಕಮಟ್ಟಿಗೆ ಚೆನ್ನಾಗಿರುವ ಹೆಣ್ಣುಮಕ್ಕಳಿಗಿಂತ, ಬಡತನದಿಂದ ಮೇಲೇಳಬೇಕೆಂದು ಪ್ರಯಾಸಪಡುತ್ತಿರುವ ಹೆಣ್ಣುಮಕ್ಕಳ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.

## ಅಮೆರಿಕ ಕ್ರಿಶ್ಚಿಯನ್ ಕಂಟ್ರಿ?

‘ಗರ್ಭಪಾತ ನಮ್ಮ ಧರ್ಮದ ಮೌಲ್ಯಗಳಿಗೆ ಅಡ್ಡ ಬರುತ್ತದೆ’ ಎನ್ನುತ್ತಾರೆ ಇಲ್ಲಿನ ಮೂಲಭೂತವಾದಿಗಳು. ಅಮೆರಿಕವನ್ನು ಕ್ರಿಶ್ಚಿಯನ್ ಕಂಟ್ರಿ ಎನ್ನುವುದು ಭಾರತವನ್ನು ಹಿಂದೂ ರಾಷ್ಟ್ರ ಎಂದು ವಾದಿಸಿದಂತೆಯೇ ಅರ್ಥಹೀನ ಹೇಳಿಕೆ. ಭಾರತದಂತೆಯೇ ಅಮೆರಿಕ ಕೂಡ ಜಾತ್ಯತೀತ ರಾಷ್ಟ್ರ. ‘ಇಲ್ಲಿನ ಪ್ರಜೆಗೆ ಯಾವುದೇ ಧರ್ಮವನ್ನು ಅನುಸರಿಸುವ ಅಥವಾ ಯಾವ ಧರ್ಮವನ್ನೂ ಅನುಸರಿಸದೇ ಇರುವ ಹಕ್ಕಿದೆ’ ಎಂಬುದು ಅಮೆರಿಕದ ಸಂವಿಧಾನದಲ್ಲಿ ಅಚ್ಚಾಗಿದೆ.

ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿವ ದೇಶದಲ್ಲಿ ಒಂದು ಧರ್ಮಕ್ಕೆ ಸೇರಿದ ಬಹುಸಂಖ್ಯಾತರು ನೀತಿಗಳನ್ನು ಬರೆಯುವಂತಾದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಯ ಸೋಲೇ ಸರಿ.

## ಮೌಲ್ಯಗಳ ಸುತ್ತ ರಾಜಕೀಯ ಮೋಡ

ದೇಶದ ನ್ಯಾಯ ವ್ಯವಸ್ಥೆ ನಿಷ್ಪಕ್ಷಪಾತವಾಗಿರಬೇಕು. ಅಮೆರಿಕದಲ್ಲದು ಇಷ್ಟು ವರ್ಷ ಹಾಗೆಯೇ ಇತ್ತು. ಸರ್ವೋಚ್ಚ ನ್ಯಾಯಾಲಯದಲ್ಲಿ ಒಂಬತ್ತು ಜನ ನ್ಯಾಯಮೂರ್ತಿಗಳು ಚರ್ಚಿಸಿ ನ್ಯಾಯ ಬರೆಯುತ್ತಾರೆ. ಈ ನ್ಯಾಯಮೂರ್ತಿಗಳದು ಜೀವಮಾನದ ಸ್ಥಾನ. ಸ್ವತಃ ನ್ಯಾಯಮೂರ್ತಿಗಳೇ ತಾವು ನಿವೃತ್ತಿಗೊಳ್ಳುತ್ತೇವೆ ಎಂದು ಘೋಷಿಸದ ಹೊರತು ಅವರು ಬದುಕಿರುವವರೆಗೆ ಯಾರೂ ಅವರನ್ನು ಈ ಸ್ಥಾನದಿಂದ ಕೆಳಗಿಳಿಸಲು ಸಾಧ್ಯವಿಲ್ಲ. ಇವರಲ್ಲಿ ಒಬ್ಬರು ಮರಣ ಹೊಂದಿದಾಗಲೋ, ನಿವೃತ್ತಿ ಘೋಷಿಸಿದಾಗಲೋ ಆ ಅವಧಿಯಲ್ಲಿ ದೇಶದ ಅಧ್ಯಕ್ಷರಾಗಿದ್ದವರು ಹೊಸ ನ್ಯಾಯಮೂರ್ತಿಗಳ ನಾಮ ನಿರ್ದೇಶನ ಮಾಡುತ್ತಾರೆ. ಸರ್ಕಾರದ ಹೌಸ್ ಮತ್ತು ಸೆನೆಟ್ ಅಂಗಗಳು ವೋಟ್ ಮಾಡಿ, ಅಲ್ಲಿ ಬಹುಮತ ಗಳಿಸಿದವರನ್ನು ನ್ಯಾಯಮೂರ್ತಿಗಳ ಸ್ಥಾನದಲ್ಲಿ ಕೂರಿಸಲಾಗುತ್ತದೆ.

**ಒಂದು ಬಟಾಣಿಯ ಗಾತ್ರದಷ್ಟೇ ಚಿಕ್ಕದಿರುವ, ಅವಳ ಗರ್ಭದಲ್ಲಿ ಬೆಳೆಯುತ್ತಲೇ ಆಕೆಯ ಮೈ ಮನಸ್ಸನ್ನು ಆವರಿಸಿಕೊಳ್ಳಲಿರುವ, ಮೊದಲ ಹದಿನೆಂಟು ವರ್ಷಗಳಾದರೂ ಆಕೆಯ ಮೇಲೆ ಅವಲಂಬಿಸಿ ಅವಳ ಭವಿಷ್ಯತ್ತನ್ನು ನಿರ್ಧರಿಸಲಿರುವ ಈ ಭ್ರೂಣದ ಕುರಿತ ತೀರ್ಮಾನಗಳನ್ನು ಆಕೆ ತೆಗೆದುಕೊಳ್ಳುವಂತಿಲ್ಲ. ಆ ನಿರ್ಣಯಗಳೇನಿದ್ದರೂ ಆಯಾ ರಾಜ್ಯಗಳ ಆಡಳಿತಕ್ಕೆ ಸೇರಿದ್ದು.**

